## ಮಲೆನಾಡಿನ ಕದಿರಿಪನಿ

ಕದಿರಿಪನಿ ಸಸ್ಯವನ್ನು ಆಂಗ್ಲ ಭಾಷೆಯಲ್ಲಿ ಡ್ರೊಸೆರಾ (drosera) ಎಂದು ಕರೆಯುತ್ತಾರೆ. ಕೀಟಗಳನ್ನು ತಿಂದು ಬದುಕುವ ಈ ಸಸ್ಯದ ಎಲೆ ಅಂಟು ದ್ರವ ಹೊಂದಿರುತ್ತದೆ. ಇದು ಹಸುರು ಅಥವಾ ಪುಡಿ ಕೆಂಪು ಬಣ್ಣದಲ್ಲಿರುವ ಸಸ್ಯವಾಗಿದೆ. ಇದರಲ್ಲಿ ಹಲವಾರು ಜಾತಿಗಳಿದ್ದು, ನೋಡಲು ಸುಂದರವಾಗಿ ಆಕರ್ಷಿಸುವ ಸಸ್ಯ ಇದಾಗಿದೆ. ಮಲೆನಾಡಿನ ಜೋಗ ಸಮೀಪದ ಮಲವಳ್ಳಿ ಗ್ರಾಮದ ಗದ್ದೆಗಳಲ್ಲಿ ಬೇಸಿಗೆ ಸಮಯದಲ್ಲಿ ಈ ಕೀಟಾಹಾರಿ ಸಸ್ಯ ಕಂಡುಬರುವುದು ಸರ್ವೇ ಸಾಮಾನ್ಯ.

—ವಿನುತಾ ಹೆಗಡೆ, ಶಿರಸಿ



## ವರ್ಣಮಯ ಚಂದ್ರಮುಕುಟ

ಈ ಪಕ್ಷಿಯನ್ನು ನೋಡಿದರೆ ಯಾವುದೋ ಚಿತ್ರ ಕಾವ್ಯವನ್ನು ನೋಡಿದಂತಾಗುತ್ತದೆ. ಅಂದದ ರೆಕ್ಕೆಪುಕ್ಕಗಳು, ತಲೆಯ ಮೇಲೆ ಸುಂದರ ಮುಕುಟ. ಇನ್ನೇನು ಬೇಕು? ಮೇಕಪ್ ಮಾಡಿಕೊಳ್ಳುವ ಅವಶ್ಯಕತೆಯೇ ಇಲ್ಲ!

ಉಪುಪಿಡೇ ಕುಟುಂಬಕ್ಕೆ ಸೇರಿದ ಉಪುಪಾ ಜಾತಿಯ ಪಕ್ಷಿಯಿದು. ಇದು ಮೂರು ಬಾರಿ ಊಪ್ ಎಂದು ಕೂಗುತ್ತದೆ. ಈ ಕಾರಣಕ್ಕೆ ಈ ಹಕ್ಕಿಗೆ ಉಪುಪಾ ಎಂದು ಹೆಸರು ಬಂದಿದೆ. ಇದಕ್ಕೆ ಚಂದ್ರಮುಕುಟವೆಂದೂ ಕರೆಯುವರು. ಇವು ಏಷಿಯಾ, ಯೂರೋಪ್, ಮಡಗಾಸ್ಕರ್‌ಗಳಲ್ಲಿ ಕಂಡುಬರುತ್ತವೆ. ಕೀಟಗಳು, ಕಪ್ಪೆಗಳು, ಸಣ್ಣ ಸರೀಸೃಪಗಳು, ಹಣ್ಣುಗಳು ಮತ್ತು ಬೀಜಗಳನ್ನು ಸೇವಿಸುತ್ತವೆ.

ಈ ಪಕ್ಷಿಯಲ್ಲಿ ವಿಚಿತ್ರವಾದ ಪ್ರಣಯದ ಪ್ರದರ್ಶನವನ್ನು ಕಾಣಬಹುದು. ಗಂಡು ಪಕ್ಷಿ ಹೆಣ್ಣಿಗೆ ಪ್ರೇಮದ ಕಾಣಿಕೆಯಾಗಿ ಆಹಾರದ ರೂಪದಲ್ಲಿ ಹುಳುಗಳನ್ನು ಅರ್ಪಿಸುತ್ತದೆ. ಹೆಣ್ಣು ಅದರತ್ತ ಆಕರ್ಷಿತವಾಗುತ್ತದೆ. ತತ್ತಿಗಳು ನೀಲಿ ಮಿಶ್ರಿತ ಹಾಲು ಬಣ್ಣದವು. ಮರದ ಪೊಟರೆಯಲ್ಲಿನ ಗೂಡಿನಲ್ಲಿ ತತ್ತಿಗಳನ್ನಿಟ್ಟು, ಹೆಣ್ಣು 15 ದಿನಗಳ ವರೆಗೆ ಕಾವು ಕೊಡುತ್ತದೆ. ಈ ಅವಧಿಯಲ್ಲಿ ಗಂಡು ಪಕ್ಷಿ ಹೆಣ್ಣಿಗೆ ಆಹಾರ ತಂದುಕೊಡುತ್ತದೆ. ನಾಲ್ಕೈದು ವಾರದಲ್ಲಿ ಗೂಡಿನಲ್ಲಿರುವ ಮರಿಗಳು ಬೆಳವಣಿಗೆ ಹೊಂದಿ ಹಾರಿಹೋಗುತ್ತವೆ. ಇದು ಬೆಳೆಗಳಿಗೆ ಉಪದ್ರವಕಾರಿಯಾದ ಕೀಟಗಳನ್ನು ತಿಂದು ಹಾಕುವುದರಿಂದ ರೈತನ ಮಿತ್ರ ಎನ್ನಬಹುದು.

—ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು





## ಮನಮೋಹಕ ಅಣೆಕಟ್ಟು, ಉದ್ಯಾನ

ಶಿವಮೊಗ್ಗದಿಂದ 29 ಕಿಲೋ ಮೀಟರ್ ಹಾಗೂ ಶಿಕಾರಿಪುರದಿಂದ 18 ಕಿಲೋ ಮೀಟರ್ ದೂರದಲ್ಲಿ ಈ ಅಂಜನಾಪುರ ಡ್ಯಾಮ್ ಮತ್ತು ಉದ್ಯಾನವನ ಇದೆ. ಇದೊಂದು ಸುಂದರ ತಾಣ. ಕುಮುದ್ವತಿ ನದಿಗೆ ಅಡ್ಡಲಾಗಿ ಕಟ್ಟಿದ ಡ್ಯಾಮ್. ಈ ಅಣೆಕಟ್ಟು ಈ ವರ್ಷದ ಮಳೆಗಾಲದಲ್ಲಿ ಎರಡು ಬಾರಿ ಕೋಡಿ ಹರಿದಿತ್ತು. ಈ ನೀರು ಶಿಕಾರಿಪುರ ಹಾಗೂ ಶಿರಾಳಕೊಪ್ಪಕ್ಕೆ ಕುಡಿಯುವ ನೀರನ್ನು ಒದಗಿಸುವುದಲ್ಲದೆ ಸುತ್ತಮುತ್ತಲಿನ 4000 ಹೆಕ್ಟೇರ್ ಜಮೀನಿಗೆ ನೀರು ಒದಗಿಸುತ್ತದೆ.

ಡ್ಯಾಮ್ ಸಮೀಪದ 6.5 ಎಕರೆ ಜಾಗದಲ್ಲಿ ಉದ್ಯಾನವನವನ್ನು ಸೊಗಸಾಗಿ ನಿರ್ಮಾಣ ಮಾಡಲಾಗಿದೆ. ಸಿಮೆಂಟ್‌ನಲ್ಲಿ ಮಾಡಿದ ಅನೇಕ ಶಿಲ್ಪಗಳು ಇಲ್ಲಿ ಅದ್ಭುತವಾಗಿ ಮೂಡಿವೆ. ತುಂಬ ನೈಜವಾಗಿ ಇರುವ ಶಿಲ್ಪಗಳು ಗ್ರಾಮೀಣ ಸೊಗಡನ್ನು ಬಿಂಬಿಸುತ್ತವೆ.

ಉದ್ಯಾನದಲ್ಲಿ 1942ರಲ್ಲಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ ಈಸೂರಿನ ಯೋಧರ ಶಿಲ್ಪಗಳು ಸೇರಿದಂತೆ ಆ ಇಡೀ ಈಸೂರು ಸ್ವಾತಂತ್ರ್ಯ ಹೋರಾಟದ ಚಿತ್ರಣ, ಯೋಧರನ್ನು ನೇಣಿಗೆ ಹಾಕುವ ಶಿಲ್ಪ, ಡೋಲು ಕುಣಿತದ ಶಿಲ್ಪ, ಉಳುವ ರೈತನ ಶಿಲ್ಪ, ಬಿತ್ತನೆ ಮಾಡುವ ಮಹಿಳೆಯರ ಶಿಲ್ಪ, ಏತ ನೀರಾವರಿ ಹೀಗೆ ಗ್ರಾಮೀಣ ಭಾಗದ ಹಲವು ಬಗೆಯ ಚಿತ್ರಣಗಳನ್ನು ಕಟ್ಟಿಕೊಡುವ ಶಿಲ್ಪಗಳು ಇಲ್ಲಿ ತುಂಬಾ ನೈಜವಾಗಿ ಮೂಡಿಬಂದಿವೆ.

—ಎಸ್. ಶಿವಪ್ರಸಾದ್, ಶಿವಮೊಗ್ಗ



